# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **475** |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ವರ್ಷ ಫೆಬ್ರುವರಿಯಿಂದ ಮೇ ಮಾಹೆವರೆಗೆ ವಿದ್ಯುತ್ ಬೇಡಿಕೆ ಎಷ್ಟಿತ್ತು ಹಾಗೂ ಪ್ರಸ್ತುತ ವರ್ಷ ಈ ಬೇಡಿಕೆ ಎಷ್ಟಿರಬಹುದು ಎಂದು ಅಂದಾಜಿಸಲಾಗಿದೆಯೇ; ಹಾಗೂ ಸಂಭಾವ್ಯ ವಿದ್ಯುತ್ ಬೇಡಿಕೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು (ಸಂಪೂರ್ಣ ವಿವರ ನೀಡುವುದು) | ಕಳೆದ ವರ್ಷ ಫೆಬ್ರುವರಿ-24 ರಿಂದ ಮೇ-24 ಮಾಹೆವರೆಗೆ ವಿದ್ಯುತ್ ಬೇಡಿಕೆ 36627 ಮಿ.ಯೂ ಗಳಾಗಿರುತ್ತದೆ. ಹಾಗೂ ಫೆಬ್ರುವರಿ-25 ರಿಂದ ಮೇ-25 ಮಾಹೆವರೆಗೆ ಅಂದಾಜಿಸಲಾದ ವಿದ್ಯುತ್ ಬೇಡಿಕೆ 37454 ಮಿ.ಯೂ ಗಳಾಗಿರುತ್ತದೆ.<br>ಪ್ರಸ್ತುತ ರಾಜ್ಯದಲ್ಲಿ 2024-25 ರಲ್ಲಿ ಅಂದಾಜಿಸಲಾದ ಬೇಡಿಕೆಯ ಪ್ರಮಾಣ 92082 ಮಿ.ಯೂ ಇದ್ದು, ಸದರಿ ಬೇಡಿಕೆಯ ದಿನವಹಿ ಸರಾಸರಿ ಪರಿಮಾಣವು ಏಪ್ರಿಲ್-24 ರಿಂದ ಡಿಸೆಂಬರ್-24ರ ಅಂತ್ಯದವರೆಗೆ 235 ಮಿ.ಯೂ ಗಳಾಗಿರುತ್ತದೆ.<br>ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲಾಗುತ್ತಿದೆ. ರಾಜ್ಯದಲ್ಲಿ ಉತ್ಪಾದನೆ ಘಟಕಗಳಿಂದ ಉತ್ಪಾದನೆಯಾಗುವ ನಿಗದಿತ ಶಕ್ತಿಯು ಕಡಿಮೆಯಾದಲ್ಲಿ ಬ್ಯಾಂಕಿಂಗ್ ಸಿಸ್ಟಮ್ ನಲ್ಲಿ/ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್ ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತದೆ.<br>ಪ್ರಸ್ತುತ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ರಾಜ್ಯದ ವಿದ್ಯುತ್ ಜಲಾಶಯಗಳಲ್ಲಿ ನೀರಿನ ಲಭ್ಯತೆಯು ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಉತ್ತಮವಾಗಿದೆ. ಆದಾಗ್ಯೂ ಸಹ ಡಿಸೆಂಬರ್-2024 ರಿಂದ ಮೇ-2025 ರವರೆಗೆ ವಿದ್ಯುತ್ ಕೊರತೆಯು ಕಂಡುಬಂದಿರುತ್ತದೆ. ಈ ವಿದ್ಯುತ್ ಕೊರತೆಯನ್ನು ಸರಿದೂಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ;<br>1. ವಿದ್ಯುತ್ ವಿನಿಮಯ ಕೇಂದ್ರಗಳಿಂದ (Energy Exchanges) ದಿನವಹಿ ಆಧಾರದ ಮೇಲೆ ಬೇಡಿಕೆಗನುಗುಣವಾಗಿ ವಿದ್ಯುತ್ ಖರೀದಿ ಮಾಡಲಾಗುತ್ತಿದೆ.<br>2. ವಿದ್ಯುತ್ ವಿನಿಮಯ (Banking Arrangement) ಅಡಿಯಲ್ಲಿ ಇತರೆ ರಾಜ್ಯಗಳಿಂದ ಈ ಕೆಳಕಂಡಂತೆ ವಿದ್ಯುತ್ ಪಡೆಯಲಾಗುತ್ತಿದೆ.<br>• ಪಂಜಾಬ್ ರಾಜ್ಯದಿಂದ |

| ಕ್ರ. ಸಂ | ಅವಧಿ | ಪಂಜಾಬ್ ರಾಜ್ಯದಿಂದ ಪಡೆಯಲಾಗುತ್ತಿರುವ ವಿದ್ಯುತ್ ಪ್ರಮಾಣ (RTC) |
|---|---|---|
| 1 | 1-11-2024 ರಿಂದ 31-12-2024 | 50 MW |
| 2 | 01-01-2025 ರಿಂದ 31-01-2025 | 350 MW |
| 3 | 01-02-2025 ರಿಂದ 10-04-2025 | 531 MW |
| 4 | 11-04-2025 ರಿಂದ 15-04-2025 | 431 MW |
| 5 | 16-04-2025 ರಿಂದ 30-04-2025 | 200 MW |

- ಉತ್ತರ ಪ್ರದೇಶದಿಂದ 100 ಮೆ.ವ್ಯಾ. ನಿಂದ 1200 ಮೆ.ವ್ಯಾ ವರೆಗೆ ಬೆಳಿಗ್ಗೆ ಮತ್ತು ಸಂಜೆಯ Peak ವಿದ್ಯುತ್ ಬೇಡಿಕೆಗಾಗಿ ಡಿಸೆಂಬರ್-2024 ರಿಂದ ಮೇ-2025ರ ಅಂತ್ಯದವರೆಗೆ ವಿದ್ಯುತ್ ಪಡೆಯಲಾಗುತ್ತಿದೆ.

<table>
<tr><td></td><td></td><td>3. ಮುಂದುವರೆದು, ವಿದ್ಯುತ್ ವಿನಿಮಯ ಕೇಂದ್ರಗಳಿಂದ ಮುಂಗಡವಾಗಿ 24.01.2025 ರಿಂದ 31.01.2025 ರವರೆಗೆ 100 ಮೆ.ವ್ಯಾ, 01.02.2025 ರಿಂದ 28.02.2025 ರವರೆಗೆ 300 ರಿಂದ 600 ಮೆ.ವ್ಯಾ, 01.03.2025 ರಿಂದ 31.05.2025 ರವರೆಗೆ 1000 ಮೆ.ವ್ಯಾ, ವಿದ್ಯುತ್ತನ್ನು ಖರೀದಿಸಲಾಗಿದೆ.</td></tr>
<tr><td>ಆ)</td><td>BTPS, YTPS & RTPS ನಲ್ಲಿ ಎಷ್ಟು ಘಟಕಗಳಿವೆ; ಅವುಗಳಲ್ಲಿ ಕಾರ್ಯನಿರ್ವಹಿಸುವ ಘಟಕಗಳೆಷ್ಟು; ಅವುಗಳಿಂದ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣವೆಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು)</td><td>
<table>
<tr><th rowspan="2">ಉತ್ಪಾದನೆ ಕೇಂದ್ರ</th><th rowspan="2">ಘಟಕಗಳ ಸಂಖ್ಯೆ / ಸಾಮರ್ಥ್ಯ</th><th rowspan="2">ಕಾರ್ಯನಿರ್ವಹಿಸುತ್ತಿರುವ ಘಟಕಗಳು</th><th colspan="2">ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣ</th></tr>
<tr><th>(01.04.2024 ರಿಂದ 28.02.2025 ರವರೆಗೆ) MU</th><th>ಲಭ್ಯವಿರುವ ಘಟಕಗಳಿಂದ ಗರಿಷ್ಠ ಉತ್ಪಾದನೆ MU/ದಿನ</th></tr>
<tr><td>BTPS</td><td>3 ಘಟಕಗಳು- 2x500 & 1x700 MW, ಒಟ್ಟು 1700 MW</td><td>2x500 MW ಹಾಗೂ 1x700 MW ಘಟಕಗಳು</td><td>7286.94</td><td>32.88</td></tr>
<tr><td>YTPS</td><td>2 ಘಟಕಗಳು- 2x800MW, ಒಟ್ಟು 1600 MW</td><td>2x800 MW ಘಟಕಗಳು</td><td>5188.38</td><td>32.64</td></tr>
<tr><td>RTPS</td><td>8 ಘಟಕಗಳು, 7x210 MW ಹಾಗೂ 1x250 MW ಒಟ್ಟು 1720 MW</td><td>5x210 MW ಹಾಗೂ 1x250 MW ಘಟಕಗಳು.</td><td>7479.14</td><td>31.2</td></tr>
</table>
</td></tr>
<tr><td>ಇ)</td><td>RTPSನ 1ನೇ ಮತ್ತು 4ನೇ ಘಟಕಗಳು ಎಂದಿನಿಂದ ಮತ್ತು ಯಾವ ಕಾರಣಕ್ಕೆ ಉತ್ಪಾದನೆ ಕಾರ್ಯ ನಿಲ್ಲಿಸಿವೆ; ಸದರಿ ಘಟಕಗಳು ಇಲ್ಲಿಯವರೆಗೆ ದುರಸ್ಥಿ ಆಗದಿರಲು ಕಾರಣಗಳೇನು ಹಾಗೂ ಅವುಗಳನ್ನು ಯಾವ ಕಾಲಮಿತಿಯಲ್ಲಿ ದುರಸ್ಥಿ ಮಾಡಲಾಗುವುದು?</td><td>ಘಟಕ # 1: 08.08.2022 ರಿಂದ ಉತ್ಪಾದನೆ ಕಾರ್ಯ ನಿಲ್ಲಿಸಿದೆ. ಕಾರಣ: ಕಲ್ಲಿದ್ದಲು ಬಂಕರ್, ಮಿಲ್ ಗಳು, ಫೀಡರ್, ಸಂಪರ್ಕಿತ ಪೈಪಿಂಗ್ ಮತ್ತು ಸಂಪರ್ಕಿತ ಉಪಕರಣಗಳು 8 ಆಗಸ್ಟ್ 2022 ರಂದು ಪತನಗೊಂಡಿರುತ್ತವೆ..<br>ಕಲ್ಲಿದ್ದಲು ಬಂಕರ್ ಮರುಸ್ಥಾಪನೆ ಕಾರ್ಯದ ಟೆಂಡರ್ ಕರೆಯಲಾಗಿದೆ, ಕಾಲ್-1,2,3 ರಲ್ಲಿ ಯಾವುದೇ ಬಿಡ್‌ಗಳು ಬಂದಿರುವದಿಲ್ಲ. ಸಂಭಾವ್ಯ ಏಜೆನ್ಸಿಗಳಾದ M/S BHEL, M/S BFPL, M/S GE ಪವರ್ ಗಳಿಂದ ಸ್ಥಳ ಪರಿಶೀಲನೆ ಮತ್ತು ಚರ್ಚೆಗಳು ಪ್ರಕ್ರಿಯೆಯಲ್ಲಿದೆ. ಮರುಸ್ಥಾಪನೆಯು ಕಾರ್ಯದೇಶದ ದಿನಾಂಕದಿಂದ 15 ತಿಂಗಳುಗಳು ಎಂದು ಯೋಜಿಸಲಾಗಿದೆ (ಅಂದಾಜು ಜೂನ್ -2026)<br>ಘಟಕ # 4: 09.11.2024 ರಿಂದ ಉತ್ಪಾದನೆ ಕಾರ್ಯ ನಿಲ್ಲಿಸಿದೆ. ಕಾರಣ: ಬಾಯ್ಲರ್ ವಾಟರ್ ಟ್ಯೂಬ್‌ನ ವೈಫಲ್ಯ 9ನೇ ನವೆಂಬರ್ 2024 ರಂದು ಸಂಭವಿಸಿದೆ. ಬಾಯ್ಲರ್ ಮರುಸ್ಥಾಪನೆಯ ಜೊತೆಗೆ ಘಟಕ ನಿಯಂತ್ರಣ ವ್ಯವಸ್ಥೆಯ ನವೀಕರಣ ಕಾರ್ಯವನ್ನು ಸಹ ಕೈಗೆತ್ತಿಕೊಳ್ಳಲಾಗಿದೆ.<br>ಸಾಮಗ್ರಿ ಪೂರೈಕೆ ಪೂರ್ಣಗೊಂಡಿದೆ. ಬಾಯ್ಲರ್ ಮತ್ತು ಯುನಿಟ್ ನಿಯಂತ್ರಣ ವ್ಯವಸ್ಥೆಯ ಮರುಸ್ಥಾಪನೆ ಕಾರ್ಯಗಳು ಪ್ರಗತಿಯಲ್ಲಿವೆ. ಏಪ್ರಿಲ್ 2025 ರ ಮೊದಲ ವಾರದ ವೇಳೆಗೆ ಈ ಘಟಕವನ್ನು ಮತ್ತೆ ಸೇವೆಗೆ ತರಲಾಗುವುದು.</td></tr>
</table>

ಸಂಖ್ಯೆ: ಎನರ್ಜಿ 40 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು